# 5

# ಕ್ರಿಸ್ತನ ರೂಪಾಂತರ

ಒಂದು ವಿಶಿಷ್ಟವಾದ ಘಟನೆಯು ಮತ್ತಾಯ 17:1-8ರಲ್ಲಿ ದಾಖಲೆ ಯಾಗಿದೆ,

> ಆರು ದಿನಗಳಾದ ಮೇಲೆ ಯೇಸು ಪೇತ್ರನನ್ನೂ ಯಾಕೋಬನನ್ನೂ ಅವನ ಸಹೋದರನಾದ ಯೋಹಾನನನ್ನೂ ಮಾತ್ರ ವಿಂಗಡವಾಗಿ ಕರೆದು ಕೊಂಡು ಎತ್ತರವಾದ ಬೆಟ್ಟಕ್ಕೆ ಹೋದನು. ಅಲ್ಲಿ ಆತನು ಅವರ ಮುಂದೆ ರೂಪಾಂತರ ಗೊಂಡನು. ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು; ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು. ಇದಲ್ಲದೆ ಮೋಶೆಯೂ ಎಲೀಯನೂ ಆತನ ಸಂಗಡ ಮಾತಾಡುತ್ತಾ ಅವರಿಗೆ ಕಾಣಿಸಿಕೊಂಡರು. ಆಗ ಪೇತ್ರನು ಯೇಸುವಿಗೆ, "ಕರ್ತನೇ, ನಾವು ಇಲ್ಲೇ ಇರುವುದು ಒಳ್ಳೇದು; ನಿನಗೆ ಇಷ್ಟವಾದರೆ, ನಾನು ನಿನಗೊಂದು, ಮೋಶೆಗೊಂದು, ಮತ್ತು ಎಲೀಯನಿಗೊಂದು ಇಲ್ಲಿ ಮೂರು ಪರ್ಣಶಾಲೆಗಳನ್ನು ಕಟ್ಟುವೆನು" ಎಂದು ಹೇಳಿದನು. ಹೀಗೆ ಮಾತಾಡುತ್ತಿರುವಾಗಲೇ ಕಾಂತಿಯುಳ್ಳ ಮೋಡವು ಅವರ ಮೇಲೆ ಕವಿಯಿತು ಇದಲ್ಲದೆ ಆ ಮೋಡದೊಳಗಿಂದ, "ಈತನು ನನ್ನ ಪ್ರಿಯ ಕುಮಾರನು, ನಾನು ಈತನಲ್ಲಿ ಬಹಳವಾಗಿ ಆನಂದಿಸುತ್ತಿದ್ದೇನೆ; ಈತನ ಮಾತನ್ನು ಕೇಳಿರಿ!" ಎಂಬ ಆಕಾಶವಾಣಿ ಆಯಿತು. ಶಿಷ್ಯರು ಇದನ್ನು ಕೇಳಿ ಬಹಳವಾಗಿ ಹೆದರಿ ಬೋರಲು ಬಿದ್ದರು. ಆಗ ಯೇಸು ಹತ್ತರಕ್ಕೆ ಬಂದು ಅವರನ್ನು ಮುಟ್ಟಿ, "ಏಳಿರಿ, ಹೆದರಬೇಡಿರಿ" ಎಂದು ಹೇಳಿದನು. ಅವರು ಕಣ್ಣೆತ್ತಿ ನೋಡಿದಾಗ ಯೇಸುವನ್ನೇ ಹೊರತು ಮತ್ತಾರನ್ನೂ ಕಾಣಲಿಲ್ಲ.[1]

ಕ್ರಿಸ್ತನು ರೂಪಾಂತರ ಗೊಂಡಿದ್ದು ಎಲ್ಲಾ ಪವಿತ್ರ ಚರಿತ್ರೆಯಲ್ಲಿ ಅತೀ ಹೆಚ್ಚು ಗಂಭೀರ ವಾದ ದೃಶ್ಯಗಳಲ್ಲಿ ಒಂದಾಗಿದೆ. ಯೇಸು ತನ್ನ ಸಭೆಯನ್ನು ಕಟ್ಟುವೆನೆಂದು ವಾಗ್ದಾನ ಮಾಡಿದ ಒಂದು ವಾರದ ತರುವಾಯ ಇದು ಸಂಭವಿಸಿತು (ಮತ್ತಾಯ 16:18). ಬಹುಶಃ ಕೈಸರೈಯ ಫಿಲಿಪ್ಪಿ ಹಾಗೂ ಯೆರೂಸಲೇಮಿನ ಮಧ್ಯದಲ್ಲಿಯ ದಾರಿಯ ಮೇಲೆ ಇದ್ದ ಪರ್ವತದ ಮೇಲಿನ ಸ್ಥಳದಲ್ಲಿ ನಡೆಯಿತು. ಯೇಸು ಮೂವರು ಸಾಕ್ಷಿಗ ಳನ್ನು ತೆಗೆದುಕೊಂಡು ಹೋಗಿದ್ದನು: ಪೇತ್ರ, ಯಾಕೋಬ ಹಾಗೂ ಯೋಹಾನ. ಬೇರೆ ಸಂದರ್ಭಗಳಲ್ಲಿಯೂ ಆಯ್ಕೆಯಾದ ಮೂವರು ಅವರಾಗಿದ್ದರು.[2] ಎಲ್ಲಾ ಅಪೊಸ್ತಲರಲ್ಲಿ ಈ ಮೂವರು ಯೇಸುವಿನ ಮನಸ್ಸಿನಲ್ಲಿದ್ದ ಉದ್ದೇಶಕ್ಕಾಗಿ ಹೃದಯದಲ್ಲಿಯೂ ಜೀವನದಲ್ಲಿಯೂ ಚೆನ್ನಾಗಿ ಸಿದ್ಧರಾಗಿದ್ದರು. ಅನಂತರದಲ್ಲಿ ಪೌಲನು ಇವರ ಬಗ್ಗೆ "ಸಭಾಸ್ತಂಭಗಳೆಂದು ಹೆಸರುಗೊಂಡಿದ್ದವರು" ಎಂದು ಕರೆದಿದ್ದಾನೆ (ಗಲಾತ್ಯ 2:9). ಅವರ ಆಯ್ಕೆಗೆ ಯಾವುದೇ ಕಾರಣವಿದ್ದರು, ಈ ಸಂದರ್ಭದಲ್ಲಿ ಯೇಸುವಿನೊಂದಿಗೆ ಪ್ರಾರ್ಥಿಸಲು ಅವರು ಪರ್ವತದ ಮೇಲೆ ಹೋದರು.

## ಯೇಸುವು ರೂಪಾಂತರ ಹೊಂದಿದನು

ಯೇಸುವು ಪ್ರಾರ್ಥಿಸುತ್ತಿದ್ದಾಗ, ಆತನ ರೂಪವು ಬದಲಾಯಿತು. ಮಹಿಮೆಪಡಿಸಲ್ಪಟ್ಟ ಸ್ಥಿತಿಯಲ್ಲಿ ಆತನು ಕಾಣಿಸಿಕೊಂಡನು. ತನ್ನ ಭೂ ನಿವಾಸಕಾಲಕ್ಕೆ ಪೂರ್ವ ಆತನು ಧರಿಸಿದ್ದ ರೂಪವನ್ನು ಹಾಗೂ ಆತನು ಮಹಿಮೆಪಡಿಸಲ್ಪಟ್ಟ ನಂತರ ಹೊಂದುವ ವೈಭವದ ಕುರಿತು ಇದು ಸೂಚಿಸುತ್ತದೆ. ಪರಲೋಕ ಕ್ಷೇತ್ರದಲ್ಲಿಯ ನಿವಾಸಿಗಳಿಗೆ ಅತಿಶಯವಾದ ಕಾಣಿಸುವಿಕೆಯಾಗುತ್ತದೆ. ಕರ್ತನೊಂದಿಗೆ ತನ್ನ ಅನುಭವದನಂತರ ಮೋಶೆಯ ಮುಖವು ಪ್ರಕಾಶಿಸಿತು (ವಿಮೋಚನಕಾಂಡ 34:29). ತಾರ್ಸದ ಸೌಲನಿಗೆ ಯೇಸುವು ಕಾಣಿಸಿ ಕೊಂಡಾಗ, "ಸೂರ್ಯನ ಹೊಳಪಿಗಿಂತ ಹೆಚ್ಚಾಗಿ ಹೊಳೆಯುವ" ಬೆಳಕು ಅಲ್ಲಿತು (ಅಪೊಸ್ತಲರ ಕೃತ್ಯ 26:13). ಪತ್ಮೊಸಿನಲ್ಲಿ ಯೋಹಾನನು ನೋಡಿದ ಯೇಸುವಿನ ರೂಪವು ಕೇಂದ್ರೀಕರಿಸಲು ಮಹಿಮೆಯುಳ್ಳ ಸಂಗತಿಯಾಗಿತ್ತು (ಪ್ರಕಟನೆ 1). ರೂಪಾಂತರದ ಸಮಯದಲ್ಲಿ, ಯೇಸುವಿನ ಮುಖಭಾವವು ಸೂರ್ಯನಂತೆ ಪ್ರಕಾಶಮಾನವಾಗಿತ್ತು. ಆತನ ಉಡುಪುಗಳು ಹೆಚ್ಚಾಗಿ ಹೊಳಪುಳ್ಳವುಗಳಾಗಿದ್ದವು. ಅದೊಂದು ಅದ್ಭುತಕರವಾದ ನೋಟವಾಗಿತ್ತು.

## ಮೋಶೆ ಮತ್ತು ಎಲೀಯರು ಕಾಣಿಸಿಕೊಂಡರು

ಪೇತ್ರ, ಯಾಕೋಬ ಮತ್ತು ಯೋಹಾನರು ಯೇಸುವನ್ನು ವೀಕ್ಷಿಸಿದಾಗ, "ಇಗೋ, ಇಬ್ಬರು ಪುರುಷರು ಆತನೊಂದಿಗೆ ಮಾತಾಡುತ್ತಿದ್ದರು" (ಲೂಕ 9:30). ಮೋಶೆ ಮತ್ತು ಎಲೀಯರ ಹೊರಟು ಹೋಗುವಿಕೆಯೊಂದಿಗೆ ಸಂಬಂಧಿಸಿ ಯಾವಾಗಲೂ ಒಂದು ರೀತಿಯ ರಹಸ್ಯವಿತ್ತು. ವಾಗ್ದತ್ತ ದೇಶದ ಗಡಿಯಲ್ಲಿ ಮೋಶೆಯು ಮರಣ ಹೊಂದಿದನು. ಆದರೆ ಮಾನವ ಹಸ್ತಗಳಿಂದ ಹೂಣಲ್ಪಡಲಿಲ್ಲ. ಮೋಶೆಯ ದೇಹದ ಬಗ್ಗೆ ಸೈತಾನನಿಗೂ ಪ್ರಾಧಾನ ದೇವದೂತ ಮಿಕಾಯೇಲನಿಗೂ ಮಧ್ಯೆ ನಡದ ಕುತೂಹಲಕಾರಿಯಾದ ವಾಗ್ವಾದದ ಬಗ್ಗೆ ಯೂದ 9ರಲ್ಲಿ ಹೇಳಲ್ಪಟ್ಟಿದೆ. ಯೂದನು ಇದನ್ನು ವಿವರವಾಗಿ ವಿವರಿಸಲಿಲ್ಲ. ಇದು ಬೇರೆ ಎಲ್ಲಿಯೂ ಹೇಳಲ್ಪಟ್ಟಿರುವದಿಲ್ಲ. ಮೋಶೆಯ ಅಂತಿಮ ವಿಶ್ರಾಂತಿ ಸ್ಥಳವು ಗುರುತಿಸಲ್ಪಟ್ಟಿರುವದಿಲ್ಲ (ಧರ್ಮೋಪದೇಶಕಾಂಡ 34:6).

ಎಲೀಯನು ಕ್ರಿಸ್ತನಿಗಿಂತ ಒಂದು ಸಾವಿರ ವರ್ಷ ಮೊದಲು ಜೀವಿಸಿದನು. ಹಳೇ ಒಡಂಬಡಿಕೆಯಲ್ಲಿ ಪರಲೋಕಕ್ಕೆ ಏರಿಸಲ್ಪಟ್ಟ ಇಬ್ಬರಲ್ಲಿ ಅವನು ಒಬ್ಬನಾಗಿದ್ದನು.[3] ನೇಮಿತ ಸಮಯದಲ್ಲಿ, ಬೆಂಕಿಯ ರಥವೆಂದು ವಿವರಿಸಲ್ಪಟ್ಟದ್ದು ಪರಲೋಕದಿಂದ ಬಂದಿತು. ಹಾಗೂ ಎಲೀಯನು ಈ ಜಗತ್ತಿನಿಂದ ಒಯ್ಯಲ್ಪಟ್ಟನು (2 ಅರಸು 2:11).

ರೂಪಾಂತರದ ಸಮಯದಲ್ಲಿ, ಮೋಶೆಯ ಮರಣದನಂತರ ಹದಿನೈದು ನೂರು ವರ್ಷಗಳಾದ ಮೇಲೆ ಮತ್ತು ಎಲೀಯನು ಹೊರಟು ಹೋದನಂತರ ಒಂದು ಸಾವಿರ ವರ್ಷದನಂತರ, ಅವರು ಪರ್ವತದ ಮೇಲೆ ಯೇಸುವಿನೊಂದಿಗೆ ಮಾತಾಡುತ್ತಾ ಕಾಣಿಸಿ ಕೊಂಡರು. ಇದು ಅಮರತ್ವವನ್ನು ಸಿದ್ಧಾಂತಪಡಿಸುತ್ತದೆ. ಸತ್ತವರು ಸತ್ತು ಹೋಗಿರುವದಿಲ್ಲ! ಅವರಿನ್ನೂ ಸಜೀವವಾಗಿದ್ದಾರೆ. ಮನುಷ್ಯರಲ್ಲಿ ಅಸ್ತಿತ್ವದಲ್ಲಿರುವ ಕೆಲವೊಂದು ಎಂದೂ ಅಸ್ತಿತ್ವವನ್ನು ಬಿಡುವುದಿಲ್ಲ.

ಭೂಲೋಕದಿಂದ ಹೊರಟುಹೋಗಿ ಶತಮಾನಗಳ ನಂತರ ಇಬ್ಬರು ಪುರುಷರು ಕ್ರಿಸ್ತನೊಂದಿಗೆ ಮಾತಾಡಿದರು. ಯಾವುದರ ಬಗ್ಗೆ ಮಾತಾಡಿದರು? ನಾವು ಊಹಿಸಬೇಕಾಗಿರುವದಿಲ್ಲ. ಯೇಸುವು ಮರಣವನ್ನು ಎದುರಿಸುವ ವಿಧಾನದ ಬಗ್ಗೆ ಅವರು

ಮಾತಾಡುತ್ತಿದ್ದರು (ಲೂಕ 9:31). ಅದು ಗಮನ ಸೆಳೆಯುವ ಮಹತ್ವದ ಪ್ರಸ್ತಾಪ ವಾಗಿತ್ತು. ಹಿಂದಿನ ಯುಗಗಳಲ್ಲಿಯ ಮನುಷ್ಯರಿಗೆ ಅದರಲ್ಲಿ ಆಸಕ್ತಿ ಯಾಕೆ ಇತ್ತು? ಉತ್ತರವು ಇಬ್ರಿಯ 9:15 ರಲ್ಲಿದೆ: ಪಾಪವನ್ನು ಕ್ಷಮಿಸುವದಕ್ಕೆ ಆತನ ರಕ್ತವು ಹಿಂದಕ್ಕೂ ಮುಂದಕ್ಕೂ ಹರಿಯಿತು.

## ಪರಲೋಕದಿಂದ ಒಂದು ವಾಣಿ ಬಂದಿತು

ಮೊದಲು, ಮೂವರು ಅಪೊಸ್ತಲರನ್ನು ನಿದ್ರೆಯು ವಶಪಡಿಸಿ ಕೊಂಡಿತು (ಲೂಕ 9:32). ಆದರೆ ಅವರು ಎಬ್ಬಿಸಲ್ಪಟ್ಟರು ಮತ್ತು ಅವರ ಆಸಕ್ತಿಯು ಬೇಗನೇ ಕೆರಳಿಸಲ್ಪಟ್ಟಿತು. ಪೇತ್ರನು ಆಸಕ್ತಿಯಿಂದ ಈ ಸೂಚನೆಯನ್ನು ಮಾಡಿದನು: "ನಿನಗೆ ಯಿಷ್ಟವಾದರೆ, ನಾನು ನಿನಗೊಂದು, ಮೋಶೆಗೊಂದು ಮತ್ತು ಎಲೀಯನಿಗೊಂದು ಇಲ್ಲಿ ಮೂರು ಪರ್ಣಶಾಲೆಗಳನ್ನು ಕಟ್ಟುವೆನು" (ಮತ್ತಾಯ 17:4). ಮೂವರನ್ನೂ ಸಮನಾಗಿ ಗೌರವಿಸಲು ಅವನು ಬಯಸಿದಂತೆ ತೋರಿತು. ಯೇಸುವು ಗದರಿಸಲಿಲ್ಲ; ಅದು ಹೆಚ್ಚು ಪ್ರಭಾವವುಳ್ಳ ವಿಧದಲ್ಲಿ ಮಾಡಲ್ಪಡಬೇಕಾಗಿತ್ತು. ಕಾಂತಿಯುಳ್ಳ ಮೋಡವು ಅವರ ಮೇಲೆ ಕವಿಯಿತು ದೇವರ ವಾಣಿಯು ಕೇಳಿಸಿತು: "ಈತನು ನನ್ನ ಪ್ರಿಯ ಕುಮಾರನು; ... ಈತನ ಮಾತನ್ನು ಕೇಳಿರಿ" (ಮತ್ತಾಯ 17:5). ಪೇತ್ರನು ತನ್ನ ಜೀವಮಾನದಲ್ಲೆಲ್ಲಾ ಅದನ್ನು ಜ್ಞಾಪಿಸಿಕೊಂಡನು. ಒಂದು ಸಂತತಿಯ ನಂತರ ಅವನು ಅದನ್ನು ಸಂಭಂದಿಸಿ ಹೇಳಿ ದನು (2 ಪೇತ್ರ 1:16-18).

ಇದರ ಅರ್ಥವೇನಾಗಿತ್ತು? ಮೋಶೆ ಮತ್ತು ಎಲೀಯರು ಹಳೇ ಒಡಂಬಡಿಕೆಯ ಇಡೀ ಯುಗಕ್ಕೆ ನಿಂತಿದ್ದರು. ಮೋಶೆ ಧರ್ಮಶಾಸ್ತ್ರವನ್ನು ಪ್ರತಿನಿಧೀಕರಿಸಿದನು; ಎಲೀಯನು ಪ್ರವಾದಿಗಳನ್ನು ಪ್ರತಿನಿಧೀಕರಿಸಿದನು. "ಧರ್ಮಶಾಸ್ತ್ರ ಮತ್ತು ಪ್ರವಾದಿಗಳು" ಎಂಬ ಮಾತುಗಳನ್ನು (ಮತ್ತಾಯ 7:12) ಸಾರಾಂಶವಾಗಿ ಹೇಳಲು ಯೇಸು ತಾನೇ ಉಪಯೋಗಿಸಿದನು. ಮೋಶೆ ಮತ್ತು ಪ್ರವಾದಿಗಳು ಅಧಿಕಾರ ವಾಣಿಯಾಗಿದ್ದ ಸಮಯವು ಒಂದು ಇತ್ತು. ರೂಪಾಂತರದ ಸಮಯದಲ್ಲಿ ಅಪೊಸ್ತಲರು ಕ್ರಿಸ್ತನ ಮಾತನ್ನು ಕೇಳಲು ಹೇಳಲ್ಪಟ್ಟರು. ದೇವರು ಪ್ರವಾದಿಗಳ ಮುಖಾಂತರ ಮಾತಾಡಿದನು. ಆದರೆ ತನ್ನ ಕುಮಾರನ ಮುಖಾಂತರವಾಗಿ ಈ ದಿನಗಳಲ್ಲಿ ಆತನು ನಮ್ಮೊಂದಿಗೆ ಮಾತಾಡಿದ್ದಾನೆ (ಇಬ್ರಿಯ 1:1, 2).

ರೂಪಾಂತರವನ್ನು ಸುತ್ತುವರಿದ ಘಟನೆಗಳು ಹಳೇ ಒಡಂಬಡಿಕೆಯು ಪಕ್ಕಕ್ಕೆ ಇಡಲ್ಪಟ್ಟಿದೆಯೆಂದು ಬಲವಾದ ರೀತಿಯಲ್ಲಿ ಬೋಧಿಸುತ್ತದೆ. ಈ ಪಾಠವು ಪೇತ್ರನಗೆ ಅಗತ್ಯವಾಗಿತ್ತು. ಈ ವಿಷಯವು ಪೌಲನ ಅತೀ ದೊಡ್ಡ ಹೋರಾಟಗಳಲ್ಲಿ ಒಂದಾಗಿತ್ತು. ಪಾಠವು ಇನ್ನೂ ಅಗತ್ಯವಾಗಿದೆ. ಧರ್ಮದಲ್ಲಿ ಅಧಿಕಾರದ ಧ್ವನಿಯಂತೆ ಮೋಶೆಯ ಮಾತನ್ನು ಕೇಳುವದನ್ನು ಜನರು ಇನ್ನೂ ಒತ್ತಾಯಿಸುತ್ತಾರೆ. "ಈತನು ನನ್ನ ಪ್ರಿಯ ಕುಮಾರನು ... ಈತನ ಮಾತನ್ನು ಕೇಳಿರಿ" ಎಂದು ದೇವರು ಹೇಳಿದ್ದಾನೆ.

ಈ ಸಂದರ್ಭದಲ್ಲಿ ಮೂವರು ಅಪೊಸ್ತಲರು ಸಿನಾಯಿ ಬಳಿಯಲ್ಲಿಯ ಇಸ್ರಯೇಲ್ಯ ರಂತೆ ಭಯಗೊಂಡಿದ್ದರು. ಅವರು ಬೋರಲು ಬಿದ್ದರು, ಆಗ ಯೇಸು ಅವರನ್ನು ಮುಟ್ಟಿದನು ಮತ್ತು ಅವರು ಸುತ್ತಲೂ ನೋಡಿ, "ಯೇಸುವನ್ನು ಮಾತ್ರವೇ" ನೋಡಿದರು (ಮತ್ತಾಯ 17:8). ಮೋಶೆಯೂ ಎಲೀಯನೂ ಹೊರಟು ಹೋಗಿದ್ದರು; ಅವರು ಆತನ ಪರವಾಗಿ ಬಿಟ್ಟು ಹೋಗಿದ್ದರು.

## ಮುಕ್ತಾಯ

ಮೂರು ಲೋಕಗಳಿವೆಯೆಂದು ದೇವರ ವಾಕ್ಯದಲ್ಲಿ ನಮಗೆ ಬೋಧಿಸಲ್ಪಟ್ಟಿದೆ: ಭೂಲೋಕ, ಮಧ್ಯಮಲೋಕ ಹಾಗೂ ನಿತ್ಯಲೋಕ. ರೂಪಾಂತರದ ಬಗ್ಗೆ ಅತೀ ಹೆಚ್ಚು ಆಸಕ್ತಿಯುಳ್ಳ ಸಂಗತಿಗಳಲ್ಲಿ ಒಂದು, ಪ್ರತಿಯೊಂದು ಲೋಕವೂ ಪ್ರತಿನಿಧೀಕರಿಸಲ್ಪಟ್ಟಿದ್ದು. ಅಂಥ ಕೂಟವು ಎಂದಾದರೂ ಎಲ್ಲಿತ್ತು? ಆ ದೃಶ್ಯವನ್ನು ನೋಡುವಾಗ, ಅನಂತರದ ಜೀವನದಲ್ಲಿ ನಾವು ಹೆಚ್ಚು ನಂಬಿಕೆ ಇಡುವಂತೆ ಮಾಡಿದೆ. ಮೂರು ಸಾಕ್ಷಿಗಳಲ್ಲಿ ಒಬ್ಬನಾದ ಯೋಹಾನನು ಅನಂತರದಲ್ಲಿ ಒಂದು ದಿನ ನಾವು ಕ್ರಿಸ್ತನಂತೆ ಇರುವೆವೆಂದು ಬರೆದಿದ್ದಾನೆ. “ಯಾಕಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು” (1 ಯೋಹಾನ 3:2) ಎಂದು ಬರೆದಿದ್ದಾನೆ.

---

ಟಿಪ್ಪಣಿಗಳು

[1]ಮಾರ್ಕ 9:2-8 ಹಾಗೂ ಲೂಕ 9:28-36ರಲ್ಲಿ ಸಮಾಂತರ ವಿವರಗಳನ್ನು ನೋಡಿರಿ. [2]ಯೇಸುವು ಯಾಯೀರನ ಮಗಳನ್ನು ಎಬ್ಬಿಸಿದಾಗ (ಮಾರ್ಕ 5) ಹಾಗೂ ಗೆತ್ಸೆಮನೆಯಲ್ಲಿ ಪ್ರಾರ್ಥಿಸಿದಾಗ (ಮತ್ತಾಯ 26) ಪೇತ್ರ, ಯಾಕೋಬ ಮತ್ತು ಯೋಹಾನರು ಇದ್ದರು. [3]ಅಂದರೆ, ಮರಣವನ್ನೂ ಅನುಭವಿಸದೇ ಎಲೀಯನು ಪರಲೋಕದೊಳಗೆ ಒಯ್ಯಲ್ಪಟ್ಟನು. ಇದು ಹನೋಕನ ಬಗೆಗೂ ಸತ್ಯವಾಗಿತ್ತು (ಇಬ್ರಿಯ 11:5).

© 2009 Truth for Today